No. of Printed Pages : **6**

# 6814

*Register Number*

# Language — Part I — KANNADA — Paper II

(Non-detailed Text, Composition and Grammar)

Time Allowed : 2½ Hours ] [ Maximum Marks : 100

**ಸೂಚನೆ :** (1) ಪ್ರಶ್ನೆಪತ್ರಿಕೆಯ ಮುದ್ರಣ ಸ್ವಚ್ಛವಾಗಿದೆಯೇ ಎಂದು ಖಾತರಿಪಡಿಸಿಕೊಳ್ಳಿ. ಸ್ವಚ್ಛತೆಯಲ್ಲಿ ಏನಾದರೂ ಕೊರತೆ ಇದ್ದಲ್ಲಿ ತಕ್ಷಣವೇ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿ.

(2) ಉತ್ತರಗಳು ಸ್ಪಷ್ಟವಾಗಿದ್ದು, ಕೊಟ್ಟಿರುವ ಸಾಲುಗಳ ಮಿತಿಯನ್ನು ಮೀರದಂತಿರಬೇಕು.

(3) ಬರೆಯಲು ಮತ್ತು ಅಡ್ಡಗೆರೆ ಎಳೆಯಲು ನೀಲಿ ಅಥವಾ ಕಪ್ಪು ಶಾಹಿಯನ್ನು ಬಳಸಿರಿ ಹಾಗೂ ಆಕೃತಿಗಳನ್ನು ರಚಿಸಲು ಪೆನ್ಸಿಲ್ ಬಳಸಿರಿ.

## ಭಾಗ – ಅ

## PART - A

**I.** (a) ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೂ ಉತ್ತರಿಸಿರಿ : **20x1=20**

Answer the following questions :

**1.** 'ಕೋಮು' ಈ ಪದದ ಅರ್ಥವನ್ನು ಬರೆಯಿರಿ.

**2.** 'ರಾಣಿ' – ಈ ಪದದ ಲಿಂಗವನ್ನು ಬರೆಯಿರಿ.

**3.** ತೊಲೆಗಂಬ – ಈ ಪದವನ್ನು ಬಿಡಿಸಿ ಬರೆಯಿರಿ.

**4.** ಬನ – ಈ ಪದದ ತತ್ಸಮ ಪದ ಬರೆಯಿರಿ.

**5.** ಸುಪ್ರಸಿದ್ಧ – ಈ ಪದವನ್ನು ಉಪಯೋಗಿಸಿ ವಾಕ್ಯ ರಚಿಸಿರಿ.

**6.** ರಾಮನಿಗೆ ಅಯೋಧ್ಯೆಯಲ್ಲಿ ಪಟ್ಟಾಭಿಷೇಕ ನಡೆಯಿತು. ಈ ವಾಕ್ಯದಲ್ಲಿರುವ 'ಅಯೋಧ್ಯೆಯಲ್ಲಿ' ಎಂಬುದರ ವಿಭಕ್ತಿ ಪ್ರತ್ಯಯವನ್ನು ಗುರುತಿಸಿರಿ.

**7.** ರಮೇಶನು ರಜೆಯಲ್ಲಿ ಬೆಂಗಳೂರಿಗೆ ಹೋದನು – ಈ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ.

**8.** ರೇವತಿ ಮಂಗಳೂರಿಗೆ ಹೋಗುತ್ತಿದ್ದಾಳೆ – ಈ ವಾಕ್ಯವನ್ನು ಭೂತಕಾಲಕ್ಕೆ ಪರಿವರ್ತಿಸಿ.

[ Turn over

www.careerindia.com

CAREERINDIA



9. ಕಬಡ್ಡಿ ಹುಡುಗರು ಆಟವನ್ನು ಆಟದ ಮೈದಾನದಲ್ಲಿ ಆಡಿದರು – ಈ ವಾಕ್ಯವನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ.

10. 'ಶ್ರೀ' ಪದದ ತದ್ಭವ ರೂಪ ಬರೆಯಿರಿ.
(ಅ) ಶ್ರಿ (ಆ) ಸಿರಿ (ಇ) ಶಿರಿ (ಈ) ಶ್ರೀಮತಿ

11. ನಾಮಾಂಕಿತ – ಈ ಪದವನ್ನು ಬಿಡಿಸಿ ಬರೆಯಿರಿ.
(ಅ) ನಾಮ + ಅಂಕಿತ (ಆ) ನಾ + ಅಂಕಿತ
(ಇ) ನ + ಅಂಕಿತ (ಈ) ನಾಮ + ಆಂಕಿತ

12. ತ್ರಿಪದಿ – ಪದ್ಯದಲ್ಲಿ ಎಷ್ಟು ಸಾಲುಗಳಿವೆ ?
(ಅ) ನಾಲ್ಕು (ಆ) ಆರು (ಇ) ಮೂರು (ಈ) ಎರಡು

13. ನಂಬಿಕೆ – ಪದದ ವಿರುದ್ಧ ಪದ ಬರೆಯಿರಿ.
(ಅ) ಅವನಂಬಿಕೆ (ಆ) ಅನಂಬಿಕೆ (ಇ) ದುರ್‌ನಂಬಿಕೆ (ಈ) ಅಪನಂಬಿಕೆ

14. ರವಿಸುತಂ – ಎಂದರೆ ಯಾರು ?
(ಅ) ಭೀಷ್ಮ (ಆ) ಕರ್ಣ (ಇ) ಅರ್ಜುನ (ಈ) ಭೀಮ

15. ಭೀಮ ಸೇನರು ಗಾನಗಂಧರ್ವಳಾಗಿದ್ದಳು. – ಈ ವಾಕ್ಯದಲ್ಲಿರುವ ತಪ್ಪನ್ನು ಸರಿಪಡಿಸಿ ಬರೆಯಿರಿ.

16. ಆಹಾ ಮೀನಾಳ ಜಡೆ ಎಷ್ಟು ಉದ್ದ – ಈ ವಾಕ್ಯಕ್ಕೆ ಲೇಖನ ಚಿಹ್ನೆಗಳನ್ನು ಹಾಕಿ.

17. ನಾನು ಮಾರ್ನಿಂಗ್ ಎದ್ದ ತಕ್ಷಣ ಹಲ್ಲುಜ್ಜುತ್ತೇನೆ. ಬಾತ್‌ನ ನಂತರ ಕ್ಲೀನಾದ ಬಟ್ಟೆ ಹಾಕಿಕೊಳ್ಳುತ್ತೇನೆ – ಈ ವಾಕ್ಯದಲ್ಲಿರುವ ಅನ್ಯ ಭಾಷೆಯ ಪದಗಳಿಗೆ ತಕ್ಕ ಕನ್ನಡ ಪದಗಳನ್ನು ಉಪಯೋಗಿಸಿ.

18. 'ಅಂಕಿತನಾಮ' – ಇದಕ್ಕೆ ಒಂದು ಉದಾಹರಣೆ ನೀಡಿ.

19. 'ವಿಜಾತೀಯ ಸಂಯುಕ್ತಾಕ್ಷರ' ಕ್ಕೆ ಒಂದು ಉದಾಹರಣೆ ಕೊಡಿ.

20. ಮುಕ್ಕಣ್ಣು – ಈ ಪದದ ಸಮಾಸವನ್ನು ಹೆಸರಿಸಿರಿ.

www.careerindia.com

CAREERINDIA



(b) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **5x2=10**

Answer the following questions :

**21.** ಸಂಸ್ಕೃತ ಸ್ವರ ಸಂಧಿಗಳನ್ನು ಹೆಸರಿಸಿ. ಉದಾಹರಣೆ ನೀಡಿ.

**22.** ರೂಪಕ ಅಲಂಕಾರ ಎಂದರೇನು ? ಉದಾಹರಣೆ ನೀಡಿ.

**23.** ದ್ವಂದ್ವ ಸಮಾಸದ ಲಕ್ಷಣ ಬರೆದು ಉದಾಹರಣೆ ನೀಡಿ.

**24.** ಆದಿಯೊಳವರಂ ಪಿರಿದೊಂ – ಈ ಸಾಲಿಗೆ ಪ್ರಸ್ತಾರ ಹಾಕಿ.

**25.** ಕಂದ ಪದ್ಯದ ಲಕ್ಷಣ ಬರೆದು ಉದಾಹರಣೆ ನೀಡಿ.

## ಭಾಗ – ಆ

## PART - B

**II.** ಈ ಕೆಳಗಿನವುಗಳಲ್ಲಿ **ಯಾವುದಾದರೂ ನಾಲ್ಕು** ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಹತ್ತು** ಸಾಲುಗಳಿಗೆ **ಮೀರದಂತೆ** ಉತ್ತರಿಸಿರಿ : **4x5=20**

Answer **any four** questions, answers should **not exceed 10** lines each.

**26.** ಹೃದಯಗಳ ಭಾಷೆಯೇ ಬೇರೆ ಎಂಬುದರ ಅರ್ಥವೇನು ?

**27.** ಅನ್ನ ಸಮಸ್ಯೆಯ ಮೂಲ ಶಕ್ತಿಗಳಾವುವು ? ವಿವರಿಸಿ.

**28.** ಚಂಡಮಾರುತಗಳು ದೊಡ್ಡ ಹಡಗುಗಳಿಗೂ ಯಮಪ್ರಾಯ ಹೇಗೆ ?

**29.** ಹಿರಿಯರು ಅವಮಾನಿತರಾಗುವ ಪ್ರಸಂಗಗಳಾವುವು ?

**30.** ಪ್ರೈಮರಿ ಶಾಲಾ ಅಧ್ಯಾಪಕರಾಗಿದ್ದಾಗಿನ ಸಾಹೇಬರ ನೆನಪುಗಳು ಯಾವುವು ?

**31.** ಉಪಗ್ರಹದ ಮೂಲಕ ಚಂಡಮಾರುತಗಳನ್ನು ಹೇಗೆ ಪತ್ತೆಹಚ್ಚಲಾಗುತ್ತದೆ ?

[ Turn over

www.careerindia.com

CAREERINDIA



## ಭಾಗ – ಇ
## PART - C

III. 32. ಈ ಕೆಳಗಿನವುಗಳಲ್ಲಿ **ಯಾವುದಾದರೂ ಒಂದನ್ನು** ಕುರಿತು ಪ್ರಬಂಧ ಬರೆಯಿರಿ : 1x8=8

Write an essay on **any one** of the following :

(a) ಹವ್ಯಾಸಗಳು (b) ವಾರ್ತಾ ಪತ್ರಿಕೆಗಳು

33. ಈ ಕೆಳಗಿನವುಗಳಲ್ಲಿ **ಯಾವುದಾದರೂ ಒಂದನ್ನು** ಕುರಿತು ಒಂದು ಪತ್ರವನ್ನು ಬರೆಯಿರಿ. 1x8=8

Write a letter for **any one** of the following :

ನೀವು ಕೈಗೊಂಡ ಶೈಕ್ಷಣಿಕ ಪ್ರವಾಸವನ್ನು ವಿವರಿಸಿ ಗೆಳೆಯ/ಗೆಳತಿಗೆ ಪತ್ರವೊಂದನ್ನು ಬರೆಯಿರಿ.

**ಅಥವಾ**

ನಿಮ್ಮ ಊರಿಗೆ ವಾಚನಾಲಯವೊಂದನ್ನು ಸ್ಥಾಪಿಸುವಂತೆ ವಿನಂತಿಸಿ ನಿಮ್ಮ ಜಿಲ್ಲಾಧಿಕಾರಿಗಳಿಗೆ ಅರ್ಜಿಯೊಂದನ್ನು ಬರೆಯಿರಿ.

## ಭಾಗ – ಈ
## PART - D

IV. 34. ಈ ಕೆಳಗೆ ಕೊಟ್ಟಿರುವ ಕತೆಯನ್ನು ಪೂರ್ತಿಗೊಳಿಸಿ, ತಕ್ಕ ಶೀರ್ಷಿಕೆಯೊಂದನ್ನು ಬರೆಯಿರಿ. 1x5=5

Complete this story and give suitable title.

ಬಿಸಿಲ ಝಳ ನೆತ್ತಿಗೇರಿತ್ತು. ಕಾಗೆಯೊಂದು ಬಾಯಾರಿಕೆಯಿಂದ ಬೆಂದು ಅತ್ತಿತ್ತ ಸುತ್ತುತ್ತಾ ನೋಡುತ್ತಿತ್ತು. ದೂರದಲ್ಲಿ ಒಂದು ಹೂಜಿ ಇರುವುದನ್ನು ಕಾಗೆ ನೋಡಿತು........

35. ಕೆಳಗೆ ಕೊಟ್ಟಿರುವ **ಯಾವುದಾದರೂ ಒಂದು** ಶೀರ್ಷಿಕೆಯಲ್ಲಿ ಎಂಟು ಸಾಲುಗಳ ಕವಿತೆಯೊಂದನ್ನು ರಚಿಸಿ : 1x5=5

Write a poem on **any one** of the given topics in eight lines :

ದೀಪ **ಅಥವಾ** ಶಾಲೆ

36. ಈ ಕೆಳಗೆ ಕೊಟ್ಟಿರುವ ಪದ್ಯಭಾಗವನ್ನು ಓದಿ ಸಾರಾಂಶವನ್ನು ಬರೆಯಿರಿ. 1x5=5

Summarise the poem given below :

ಕುಲವಿಲ್ಲ ಯೋಗಿಗೆ ಚಲವಿಲ್ಲ ಜ್ಞಾನಿಗೆ
ತೊಲೆಗಂಬವಿಲ್ಲ ಗಗನಕ್ಕೆ ಸ್ವರ್ಗದಲಿ
ಹೊಲಗೇರಿಯಿಲ್ಲ ಸರ್ವಜ್ಞ

www.careerindia.com

CAREERINDIA



**37.** ಈ ಕೆಳಗಿನ ಗದ್ಯಭಾಗವನ್ನು ಓದಿ, ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ : **5x1=5**

Read the passage given below and answer the questions that follow :

ಅಂಬೇಡ್ಕರ್ ಅವರು ಅಂತ್ಯಜರಾಗಿ ಹುಟ್ಟಿದರೂ ಅಸ್ಪೃಶ್ಯರಾಗಿ ಉಳಿಯದೆ ಮಹಾಮಾನವರಾದರು. ಇಡೀ ಜನವರ್ಗದ ಜೀವನದಲ್ಲಿ ಹೊಸ ಚೈತನ್ಯವನ್ನು ತುಂಬಿ ಸಾಮಾಜಿಕವಾಗಿ, ರಾಜಕೀಯವಾಗಿ ಜಾಗೃತಗೊಳಿಸಿದರು. ಭಾರತೀಯರಾಗಿ ಜನಿಸಿದರೂ ವಿಶ್ವಮಾನವರಾದರು. ಅವರು ಮನುಕುಲದ ಗೌರವದ ಮಾನವೀಯತೆಯ, ಸ್ವಾಭಿಮಾನದ ಹೋರಾಟದ ಸಂಕೇತವಾದರು. ಅನ್ಯಾಯ, ಅಸಮಾನತೆ, ದಬ್ಬಾಳಿಕೆ ಮತ್ತು ಸುಲಿಗೆಯ ವಿರುದ್ಧ ಹೋರಾಡಿದರು, ಜಾತಿ ಮತ ಪಂಥಗಳ ನಿರ್ಬಂಧಗಳಾಗಲೀ, ಮೇಲು ಕೀಳೆಂಬ ತಾರತಮ್ಯಗಳಾಗಲೀ, ಬಡತನದ ಬವಣೆಯಾಗಲೀ, ಯಾವುದೊಂದೂ ವ್ಯಕ್ತಿಯ ವಿಕಾಸಕ್ಕೆ ಆತಂಕವಾಗಲಾರದು ಎನ್ನುವ ಮಾತಿಗೆ ಅಂಬೇಡ್ಕರರ ಜೀವನ ಒಂದು ಪ್ರತ್ಯಕ್ಷ ಪ್ರಮಾಣವಾಗಿದೆ. ಭಾರತದ ಸಂವಿಧಾನದ ರಚನೆಯಲ್ಲಿ ಅಂಬೇಡ್ಕರ್ ಅವರ ಪಾತ್ರ ಅತ್ಯಂತ ಮಹತ್ವಪೂರ್ಣವಾದುದು. ಸ್ವಪರಿಶ್ರಮ, ಏಕಾಗ್ರನಿಷ್ಠೆಗಳೇ ಅವರನ್ನು ವಿಶ್ವವಿಖ್ಯಾತರನ್ನಾಗಿ ಮಾಡಿಸಿದವು.

**ಪ್ರಶ್ನೆಗಳು :**

(a) ಅಂಬೇಡ್ಕರ್ ಯಾವುದಕ್ಕೆ ಹೊಸ ಚೈತನ್ಯ ತುಂಬಿದರು ?

(b) ಅಂಬೇಡ್ಕರ್ ಅವರು ಯಾವುದರ ಸಂಕೇತವಾದರು ?

(c) ಅಂಬೇಡ್ಕರ್ ಅವರು ಯಾವುದರ ವಿರುದ್ಧ ಹೋರಾಡಿದರು ?

(d) ಅಂಬೇಡ್ಕರ್ ಅವರ ನಿಲುವು ಎಂತಹದು ?

(e) ಅಂಬೇಡ್ಕರ್ ಅವರ ಮಹತ್ವಪೂರ್ಣ ಸಾಧನೆ ಯಾವುದು ?

**38.** (a) ಈ ಕೆಳಗೆ ಕೊಟ್ಟಿರುವ ಘಟನೆಯನ್ನು ಓದಿ, ಅದರ ಕುರಿತು ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸಿರಿ : **3x1=3**

Read the following scenario and answer the questions that follow :

ರನ್ನನ ಗದಾಯುದ್ಧ ಕಾವ್ಯವು ಗಂಭೀರ ಶೈಲಿಯಲ್ಲಿದೆ. ಪಂಪಭಾರತದ ಹದಿಮೂರನೆಯ ಆಶ್ವಾಸದ ಗದಾಯುದ್ಧ ಪ್ರಸಂಗವನ್ನು ಆಧರಿಸಿ ರನ್ನನು ತನ್ನ ಕಾವ್ಯವನ್ನು ರಚಿಸಿದ್ದಾನೆ. ಮಹಾಭಾರತ ಯುದ್ಧದ ಹದಿನೇಳನೆಯ ದಿನ ದುರ್ಯೋಧನನು ತನ್ನ ಆಪ್ತ ಸ್ನೇಹಿತನಾದ ಕರ್ಣನ ಕಳೇಬರವನ್ನು ನೋಡಿ ದುಃಖಪಡುತ್ತಾನೆ.

**ಪ್ರಶ್ನೆಗಳು :**

(i) ಗದಾಯುದ್ಧ ಯಾವ ಶೈಲಿಯಲ್ಲಿದೆ ?

(ii) ಗದಾಯುದ್ಧ ಕಾವ್ಯವನ್ನು ರಚಿಸಿದ ಕವಿ ಯಾರು ?

(iii) ಕರ್ಣನ ಕಳೇಬರವನ್ನು ನೋಡಿದ ದುರ್ಯೋಧನನಿಗೆ ಏನಾಗಿತ್ತು ?

(b) ಈ ಕೆಳಗೆ ಕೊಟ್ಟಿರುವ ಸಂದರ್ಭವನ್ನು ಊಹಿಸಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ :

Imagine the following situation and answer the questions accordingly : **2x1=2**

ಕುರುಡನೊಬ್ಬ ರಸ್ತೆಯನ್ನು ದಾಟಲು ಬಹಳ ಸಮಯದಿಂದ ಕಾದಿದ್ದನು. ಆ ದಾರಿಯಲ್ಲಿ ಹಲವು ಜನರು ನಡೆದು ಹೋಗುತ್ತಿದ್ದರು. ಆದರೆ ಅವನಿಗೆ ಸಹಕರಿಸಲು ಒಬ್ಬರೂ ಮುಂದೆ ಬರಲಿಲ್ಲ.

(i) ಇಂತಹದೊಂದು ಸಂದರ್ಭದಲ್ಲಿ ನೀನು ಹೇಗೆ ವರ್ತಿಸುವೆ ?

(ii) ಇತರರಿಗೆ ಸಹಕರಿಸುವುದರಿಂದ ಪ್ರಕಟವಾಗುವ ಗುಣಗಳು ಯಾವುವು ?



www.careerindia.com

CAREERINDIA



**39.** (a) ಈ ಕೆಳಗಿನ ಸಾಲುಗಳಲ್ಲಿರುವ ಆಂಗ್ಲ ಪದಗಳಿಗೆ ತಕ್ಕ ಕನ್ನಡ ಪದಗಳನ್ನು ಉಪಯೋಗಿಸಿ ಬರೆಯಿರಿ. **1x2=2**

Replace the following English words with suitable Kannada words.

ಬೆಳಗ್ಗೆ ಲೇಟಾಗಿ ಎದ್ದದ್ದರಿಂದ ಸ್ಕೂಲಿಗೆ ಹೋಗಲು ಅವಸರದಿಂದ ಹೊರಟೆನು. ಬಸ್ ತುಂಬಾ ರಷಾಗಿತ್ತು. ಕ್ಲಾಸಿಗೆ ಲೇಟಾಗಿ ಹೋದೆನೆಂದು ಟೀಚರ್ ಹೊರಗಡೆ ನಿಲ್ಲಿಸಿದರು.

(b) ಕೆಳಗೆ ಕೊಟ್ಟಿರುವ ಅರಬ್ ಸಂಖ್ಯೆಗಳಿಗೆ ಸೂಕ್ತ ಕನ್ನಡ ಅಂಕೆಗಳನ್ನು ಬರೆಯಿರಿ. **1x2=2**

Translate the following Arabic numerals into Kannada numerals.

25, 381, 49, 760

**40.** (a) ಕನ್ನಡಕ್ಕೆ ಭಾಷಾಂತರಿಸಿರಿ : **1x3=3**

Translate the following into Kannada :

More people live in villages than in towns and cities in our country. But many of the villagers are poor. Government authorities must take steps to provide drinking water to them.

(b) ಈ ಕೆಳಗಿನ ಆಂಗ್ಲ ಗಾದೆಗಳಿಗೆ ಸರಿಯಾದ ಕನ್ನಡ ಗಾದೆಗಳನ್ನು ಬರೆಯಿರಿ : **1x2=2**

Translate the following English proverbs into suitable Kannada proverbs :

(i) Haste makes waste.

(ii) Do or Die.

- o O o -

www.careerindia.com